# ಮೇಘಪುರ

## ಒಡನಾಟ

ತಾಯಿಯೊಡನಾಡುವುದು ಇಂತುಟೆಂದು
ಬೋಧಿಸುವುದೆನಗೆ ಬೇಡ;
ಕ್ರಮವಿಲ್ಲದಲೆ ಮನಬಂದವೊಲು
ಆಡುವುದ ಬಲ್ಲೆ ನಾನು!

ಯಮನಿಯಮ ಬೇಡ, ಆಚಾರ ಬೇಡ,
ಆಟವನು ಕಸಬಾಗಿ ಮಾಡಬೇಡ.
ತಾಯಿ ಗುರುವಲ್ಲ! ವಾತ್ಸಲ್ಯಕೆಂದೂ
ನಿಯಮ ನಿರ್ಬಂಧವಿಲ್ಲ!

ಮಂತ್ರೋಪದೇಶವೆನಗೇಕೆ ಬೇಡಃ
ಲೀಲೆಯಿದು ವಿದ್ಯೆಯಲ್ಲ !
ಮುಕ್ತಚೈತನ್ಯದಿಂ ಪೊರಮಡುವ ಲೀಲೆಯಂ
ಮಂಧಿಪೆಯ ಜಡ ಶಾಸ್ತ್ರ ನಿಯಮದಿಂದ?

ಆಡುವೆನು ನಾನೆನ್ನ ತಾಯ ಕೂಡೆ
ಶಾಸ್ತ್ರಗಳ ಮೂಲೆಗೊತ್ತಿ !
ನುಡಿಗೆ ಬಂದುದ ಪಾಡಿ ಮನಕೆ ಬಂದುದ ಮಾಡಿ
ನಲಿಯುವೆನು ನಾನೆನ್ನ ತಾಯ ಕೂಡಿ !

## ಎದ್ದೇಳು

ಎದ್ದೇಳು! ಎದ್ದೇಳು!
ಬಿದ್ದಿರುವೆ ಏಕೆ?
ನಿದ್ದೆಯಿಂದೆದ್ದೇಳು
ಮೊದ್ದುತನವೇಕೆ?

ಭಯರಹಿತ ನೀನು,
ಲಯರಹಿತ ನೀನು!

ಬದ್ಧಾತ್ಮನಲ್ಲ,
ಶುದ್ಧಾತ್ಮ ನೀನು!

ದಾಸ ನೀನಲ್ಲ;
ಈಶನೋ ನೀನು!
ಮೂಷಿಕವು ಅಲ್ಲ,
ಕೇಸರಿಯು ನೀನು!

ಪಾಪ ನಿನಗಲ್ಲ,
ಪುಣ್ಯ ನಿನಗಲ್ಲ;
ಎಲ್ಲವನು ಮೀರ –
ಬಲ್ಲೆ ನೀ ಧೀರ!

## ಶ್ರೀ ತಾರಿಣಿಗೆ

ದೊಡ್ಡವರೆಲ್ಲರ ಹೃದಯದಿ ಕಟ್ಟಿಹ
ತೊಟ್ಟಿಲ ಲೋಕದಲಿ
ನಿತ್ಯ ಕಿಶೋರತೆ ನಿದ್ರಿಸುತಿರುವುದು

ವಿಸ್ಮೃತನಾಕದಲಿ:
ಮಕ್ಕಳ ಸಂಗದೊಳೆಚ್ಚರಗೊಳ್ಳಲಿ
ಆನಂದದ ಆ ದಿವ್ಯಶಿಶು;
ಹಾಡಲಿ; ಕುಣಿಯಲಿ; ಹಾರಲಿ; ಏರಲಿ
ದಿವಿಜತ್ವಕೆ ಈ ಮನುಜ ಪಶು !

## ಶಿಷ್ಯ

ಧೂಳಾಟವಾಡುವುದ ಕಲಿಸೆನಗೆ, ಕಂದ,
ಬಳಲಿ ಬಂದಿಹೆ ಜಗದ ಮರುಲು ರಣದಿಂದ!
ಹೇಮರತುನದ ರಾಶಿಯಾನಂದ ಸಾಕು,
ಕೆಂಧೂಳಿಯಾ ಸಿರಿಯ ಶುಭಶೋಕ ಬೇಕು.
ಕೈ ಬೆರಳ ಜರಡಿಯೊಳು ಕೇರುವುದ ಧೂಳ
ಮರೆತಿಹೆನು ಬೋಧಿಸೈ ಎನಗದನು, ಬಾಲ!
ಪೀಡಿಸುವ ಕಾಲನಂ ಪೀಡಿಸುವ ನಿನ್ನ

ಗೂಢಲೀಲಾಮೃತವ ನೀಡಿ ಸಲಹೆನ್ನ!
ನೈರ್ಮಲ್ಯದಿಂಪೆನಗೆ ಸಾಕಿನ್ನು ಸಾಕು,
ಮಣ್ಣಿಡಿದ ಮುಗುದತೆಯ ಮಾಧ್ಯುರ್ಯ ಬೇಕು:
ಕೋಲ ಕುದುರೆಯ ಮಾಡಿ ಹೊಡೆವುದನು ಕಲಿಸು,
ಲೀಲೆಯಿಂ ಕರ್ಮಗಳನೇಳಿಪುದ ಕಲಿಸು;
ಕೋಕಿಲೆಯನಣಕಿಸುವ ಕಂಠವನು ಕಲಿಸು;
ಚೇತನವ ಜಡದೊಳಗೆ ಕಾಣುವುದ ಕಲಿಸು;
ನೀಲ ನಿರ್ಮಲನಭದ ನೀರದವ ನೋಡಿ
ಮಾತಾಡಿ ಕರೆಕರೆವೆ ಕೈ ನೀಡಿ ಓಡಿ!
ನಿನ್ನ ಕೇಕೆಯೊಳಿಹುದು ಸರ್ವಾಧಿಕಾರ;
ನಿನ್ನಾಜ್ಞೆ ಮೀರದೈ ವಿಶ್ವದಾಧಾರ!
ನಿನ್ನ ನಿರ್ಲಕ್ಷತೆಯ ಧೈರ್ಯವೆನಗಿರಲಿ!
ನಿನ್ನ ಮಂಗಳ ಮುಕುತಿಯಾನಂದ ಬರಲಿ!

## ಕೇಳಿದೊಡನೆಯೆ ಬೀದಿವಾದ್ಯ

ಏನೆ ಮಾಡುತಲಿರಲಿ,
ಏನೆ ಓದುತಲಿರಲಿ,
ಧ್ಯಾನ ಮಾಡುತ್ತಿರಲಿ,
ಕಾವ್ಯ ಕಟ್ಟುತ್ತಿರಲಿ –
ಚೀಟಿ ಹಂಚಿಕೆಗಾಗಿ
ಟಾಂಗದಲಿ ಓಡುವಾ
ಬ್ಯಾಂಡಿನೋಲಗ ವಾದ್ಯ,
ನಾಗಸ್ವರದ ವಾದ್ಯ,
ಬಿದ್ದ ಕೂಡಲೆ ಕಿವಿಗೆ –
ಏನದ್ಭುತಮ್!
ನನ್ನದೆಯ ತೊಟ್ಟಿಲಿಂ
ಚಂಗನೆಯೆ ಹೊರ ಚಿಮ್ಮಿ
ಕಂದನೊಬ್ಬನು ಕೂಗಿ,
ಕುಣಿದು, ನವಿಲೊಲು ಕೇಗಿ, –
ಬಿಡುವ ಗಂಟೆಯು ಹೊಡೆಯೆ
ಒಡನೆ ಕೇಕೆಯ ಹಾಕಿ
ಶಾಲೆಯಿಂ ಹೊರದುಮುಕಿ

ನಲಿವ ಬಾಲಕರಂತೆ, –
ಕುಣಿಕುಣಿದು ಕೂಗಾಡಿ
ಹಾರಾಡಿ ಚೀರಾಡಿ
ಗಾಂಭೀರ್ಯವೀಡಾಡಿ
ನುಗ್ಗಿ ಬೀದಿಗೆ ಓಡಿ
ಕುದುರೆಗಾಡಿಯ ಹಿಂದೆ
ಧಾವಿಸಲು, ಕೈ ನೀಡಿ
ಚೀಟಿಯೊಂದನು ಬೇಡಿ,
ಮಾತಿಲ್ಲದಂತಾಗಿ
ಮಾನ ಹೋದಂತಾಗಿ
ಕೈಲಾಗದಂತಾಗಿ
ಸೋತು ಸ್ವೈವೆರಗಾಗಿ
ನಾಚುವನು ನನ್ನೊಳಿಹ
ಗುರುಪಂಡಿತಂ.
ಪಂಡಿತನು ನಾಚಿದರೆ
ಕವಿಗದೇನು?
ಕೆಲಸವೆಲ್ಲವ ಬಿಟ್ಟು,
ಹೊತ್ತಗೆಯನತ್ತಿಟ್ಟು,
ಸೊಗದ ಹನಿ ತೊಯ್ಯುತಿಹ
ಕಣ್ಣೆವೆಯ ಮುಚದೆಯೆ
ನೋಡುತ್ತ, ದಿಟ್ಟಯೊಳೆ
ಕಂದಂಗೆ ಮುತ್ತಿಟ್ಟು,
ನಲಿಯುವನು ನನ್ನೊಳಿಹ
ಕವಿಯುತಾನು!
“ಕ್ಷುದ್ರ ಬೀದಿಯ ವಾದ್ಯ
ಸಂಸ್ಕೃತಿಗೆ ದುರ್ಮೇಧ್ಯ!”
ಎಂದು ಗೌರವವೊರಲಿ
ಹಣೆ ಬಡಿದು ಕೂಗಿದರೆ
ಕವಿಯೆದೆಯ ಹಸುಳೆಗದು
ಲಕ್ಷವೇನು?

# ತೊರೆಯ ಬಳಿ

ಎಲ್ಲಿಂದ ನೀ ಬರುವೆ?

ಎಲ್ಲಿಗೋಡುತಲಿರುವೆ?
ಆರನೀ ಪರಿ ಕರೆವೆ?
ಏಕಿಂತು ಮೊರೆವೆ? – ಓ ಮುದ್ದು ತೊರೆಯೆ!

ಹೋಗುವೆಯ ಬಹು ದೂರ
ಸೇರಬೇಕೆಂದಾರ?
ನಿನ್ನ ಪಾರಾವಾರ
ಇನ್ನೆಷ್ಟು ದೂರ? – ಓ ಮುದ್ದು ತೊರೆಯೆ!

ನಿನ್ನನಾಲಿಸೆ ಬಂದೆ;
ನಿನ್ನಲ್ಲಿಗೈತಂದೆ;
ನಿನ್ನಬಳಿಯೊಳು ನಿಂದೆ;
ಮಾತಾಡು ಎಂದೆ; – ಓ ಮುದ್ದು ತೊರೆಯೆ!

ನಿನ್ನಾಟವನು ನೋಡಿ,
ನಿನ್ನೊಡನೆ ನಲಿದಾಡಿ
ನಿನ್ನಂದದೊಳೆ ಹಾಡಿ
ನಿನಗೆನ್ನ ನೀಡಿ – ಓ ಮುದ್ದು ತೊರೆಯೆ!
ನಿನ್ನೊಳಾನೊಂದಾಗಿ
ನಡೆಯೆ ನಾನಹೆ ಭೋಗಿ
ನಲಿವೆ ದುಃಖವ ನೀಗಿ
ನೀ ಸಲಿಲಯೋಗಿ! – ಓ ಮುದ್ದು ತೊರೆಯೆ!

ಹೋಗಿ ಬರುವೆನು, ತೊರೆಯೆ!
ಯೋಗಿ, ನಿನ್ನಂ ಮರೆಯೆ!
ನಿನ್ನಂತೆ ನಾ ಕರೆವೆ;
ನಿನ್ನಂತೆ ಹರಿವೆ! – ಓ ಮುದ್ದು ತೊರೆಯೆ!

## ಏಳಿರೈ ಬಾಲರೇ

ಏಳಿರೈ! ಬಾಲರೇ! ದೇಶಸೇವೆಗೈಯುವ!

ಕೇಳಿರೈ! ಕೇಳಿರೈ! ತಾಯ ಗೋಳ ರೋದನ!

ಪರಕೀಯರ ಪದತಳದೊಳು
ಹೊರಳಾಡುತ ಅಳುತಿರುವಳು!
ಕಂಡು ನೀವು ಸಹಿಪರೇ?
ಗಂಡುಗಲಿಗಳಲ್ಲವೇ?

ಅರೆಹರಿದಿಹ ಪರವಸನವ
ಧರಿಸುತ ತಾ ಮೊರೆಯಿಡುವಳು!
ಅಮ್ಮನಿರುವ ಗತಿಯನು
ನೋಡಿ ಸುಮ್ಮನಿರುವರೇ?

ಧೂಳಾಗಿದೆ ಜನನಿಯ ಮುಖ
ಹಾಳಾಗಿದೆ ಜನನಿಯ ಸುಖ!
ಏಳಿ! ಏಕೆ ಜಡತನ?
ಏಳಿ! ಸಾಕು ಬಡತನ!

ವೀರಶಿವನ ಮರೆತಿರುವಿರ?
ಧೀರತನವ ತೊರೆದಿರುವಿರ?
ಏಳಿ, ಅಮೃತ ಪುತ್ರರೆ !
ಏಳಿ, ಆನಂದಾತ್ಮರೆ !

## ಎಳಬಿಸಿಲು

ಹಿಂದಿನಾ ಶುಭದಿನಗಳನು ಮನಕೆ ತಂದು

ಚಂದದಿಂ ಬಂದಿಹುದು ಎಳಬಿಸಿಲು ಇಂದು !
ಚೆಂದಳಿರ ಕೂಡಾಡಿ ಕರೆವುದೈತಂದು
“ಕಂದ ಬಾ! ಕಂದ ಬಾ! ಬಾ ಬಂಧು!” ಎಂದು.

ಅಂದಿನಾ ಸಿರಿಯೆಲ್ಲವನು ಸೂರೆಮಾಡಿ
ಅಂದಿನಾ ತರಳತೆಯ ಕುಸುಮಗಳ ಕೂಡಿ
ಬಂಧುರದ ನೆನವರಿಕೆಯನು ದಾರ ಮಾಡಿ
“ಕಂದ ಬಾ!” ಎನುತಲಿದೆ ಮಾಲೆಯನು ನೀಡಿ !

“ಧೂಳಾಟ ಆಡೋಣ ನೀ ಬಾರೊ, ಚಂದು,
ಕಾಳಿಂಗನೆಂಬಾಳ ಗುದ್ದೋಣ ಇಂದು;
ಬಾಲೆಯ ಹಣ್ಗಳ ಚನ್ನಾಗಿ ತಿಂದು
ಜೋಲುವ ಹೂಗಳ ಕೊಯ್ಯೋಣ” ಎಂದು!

ತೊಳಲುವ ತೊರೆಯನು ನೆನಪಿಗೆ ತಂದು
“ಗೆಳೆಯ ಬಾ! ಆಡೋಣ! ಬೆಳಗಾಯ್ತು!” ಎಂದು
ನಳಿದೋಳಿನಿಂದೆನ್ನ ಬಿಗಿಯಪ್ಪಿ ನಿಂದು
ಒಲಿಯುತಿದೆ ಅಂದಿನಾ ಎಳಬಿಸಿಲು ಇಂದು!

## ಹಕ್ಕಿಗಳು

ಹಕ್ಕಿಗಳೆ ಕಾಡಿನೊಳಗಲೆದಾಡಿ ಹೋಗಿ,

ಪಕ್ಕಗಳ ಬಡಿಬಡಿದು ಬೇಸರವ ನೀಗಿ;
ತಳಿರಿಂದ ತಳಿರೆಡೆಗೆ ಹಾಡಿ ಹಾರಾಡಿ
ಬಳಲಿ ಬಹ ಜನಪದಕೆ ಸಂತಸವ ನೀಡಿ.

ಹಣ್ಣಾದ ಫಲಗಳನು ಹಾರಾಡಿ ತಿನ್ನಿ
ಕಣ್ಣಿಗಿನ ಮರೆಯಾಗುವಾಮುನ್ನ ಬನ್ನಿ
ನಿಮ್ಮನಾ ಕಳುಹಿಪುದು ಹಿರಿಗೆಲಸಕಲ್ಲ;
ನಿಮ್ಮಾಟ ನೀವಾಡಿ ಬಂದುಬಿಡಿ ಎಲ್ಲ.

ನಿಮ್ಮನೇ ಹಾರೈಸುತಿಹರೊಡನೆ ಕೂಡಿ;
ಸಮ್ಮತಿಸದವರೊಡನೆ ಹೋರಾಟ ಬೇಡಿ.
ಹಿರಿಗೆಲಸವಿಹರೊಡನೆ ಸಂಗೀತ ಬೇಡಿ.
ಸಿರಿಯವರ ಕೊಂದಿಹಳು ಲೋಭವಿಷವೂಡಿ.

ವ್ಯಾಧರಿಹರವರ ಸಹವಾಸ ನಿಮಗಲ್ಲ:
ಹೋದ ಹೃದಯರ ಸಂಗ ನಿಮಗೊಳ್ಳಿತಲ್ಲ.
ಪಂಡಿತರ ಬಲೆಯೊಳಗೆ ಸಿಲುಕದಿರಿ ನೀವು:
ಖಂಡಿಪರು ಶೋಧಿಸಲು; ನಿಮಗಹುದು ಸಾವು!

## ತಾರಾ ಸೇತು

"ಎಂತು ನೀನಿಲ್ಲಿಗೈತಂದೆ, ಮಗುವೆ?

ಚಿಂತೆ ಯಾವುದನು ಕಳೆದಿಂತು ನಗುವೆ?"

ಇಂತು ತಾಯ್ನುಡಿಯೆ ಕುಣಿದಾಡಿಯಾಡಿ
ಇಂತೆಂದಿತಾ ಮಗುವು ಮುಗಿಲ ನೋಡಿ.
"ಉಡುಗಳಾಚೆಯೊಳಿರುವ ಊರೊಳಿರಲು
'ಹುಡುಗ ಬಾ' ಎಂಬ ದನಿ ಕೇಳಿ ಬರಲು
ಕರೆವರಾರೆಂದರಿಯೆ ತಿರುಗಿ ನೋಡೆ;
ಧರೆಯ ದನಿಯೊಂದು ಸುಳಿಸುಳಿಯುತಾಡೆ;
ದನಿಯು ಬಹ ದಾರಿಯನು ಹಿಡಿದು ಬಂದೆ;
ಮನದೊಳಾಲೋಚಿಸುತ ನಭದಿ ನಿಂದೆ.
ಅಲ್ಲಿಂದ ನೀನಿರುವ ಮನೆಯ ನೋಡಿ,
ಸಲ್ಲಲಿತ ತಾರೆಗಳ ಸೇತುಮಾಡಿ,
ನೆಗೆನೆಗೆದು ತಾರೆಯಿಂ ತಾರೆಯೆಡೆಗೆ
ಅರಿಯದಂತಿಳಿದೆ ನಾ ನಿನ್ನ ತೊಡಗೆ!

## ಶ್ರೀರಾಮಕೃಷ್ಣ ಸುಪ್ರಭಾತಂ

ಹೊಮ್ಮುತಿದೆ ಮೂಡಣದಿ ಹೊಂಬೆಳಗರುಣಕಾಂತಿ;

ಓಡುತಿದೆ ಹಿಂಜರಿದು ತಿಮಿರದ ತಮೋಭ್ರಾಂತಿ;
ತುಂಬುತಿದೆ ತ್ರೈಭುವನಮಂ ಚೈತನ್ಯಶಾಂತಿ :
ಶ್ರೀರಾಮಕೃಷ್ಣ ಪ್ರಭೋ ತವ ಸುಪ್ರಭಾತಂ !

ತ್ರೇತೆಯೊಳ್ ಶ್ರೀರಾಮನೋಲವತರಿಸಿ ಬಂದೆ;
ದ್ವಾಪರದೊಳಾ ಕೃಷ್ಣ ಶ್ರೀರೂಪದಲಿ ನಿಂದೆ;

ಸರ್ವಧರ್ಮವತಾರಂ ಕಲಿಯುಗದಿ ಸಂದೆ :
ಶ್ರೀರಾಮಕೃಷ್ಣ ಪ್ರಭೋ ತವ ಸುಪ್ರಭಾತಂ !

ನಜರೇತಿನಲ್ಲಿ ಯೇಸುಸ್ವಾಮಿಯಾಗಿದ್ದೆ;
ನದಿಯದೊಳ್ ಶ್ರೀಕೃಷ್ಣ ಚೈತನ್ಯನಾಗಿದ್ದೆ;
ಮತ್ತೆ ಭಾರತದಲ್ಲಿ ನೀ ಮೈದೋರುತೆದ್ದೆ :
ಶ್ರೀರಾಮಕೃಷ್ಣ ಪ್ರಭೋ ತವ ಸುಪ್ರಭಾತಂ !

ನಿನ್ನಿಂದೆ ಪೃಥಿವಿಯಿಂದೋಡಿತು ಮತಭ್ರಾಂತಿ;
ನಿನ್ನಿಂದೆ ಮಾನವಂಗಾದುದು ಸಹನೆ ಶಾಂತಿ;
ನಿನ್ನಿಂದೆ ಅಧ್ಯಾತ್ಮವೈಜ್ಞಾನಿಕ ಕ್ರಾಂತಿ :
ಶ್ರೀರಾಮಕೃಷ್ಣ ಪ್ರಭೋ ತವ ಸುಪ್ರಭಾತಂ !

ಸಕಲ ತತ್ತ್ವದ ಸಾರ ಶ್ರೀಮೂರ್ತಿ ನೀನಾದೆ;
ಸರ್ವ ಮತಧರ್ಮ ಜೀವಜ್ಯೋತಿ ನೀನಾದೆ
ಸರ್ವಾವತಾರ ಸಂಪೂರ್ಣ ವಿಭು ನೀನಾದೆ :
ಶ್ರೀರಾಮಕೃಷ್ಣ ಪ್ರಭೋ ತವ ಸುಪ್ರಭಾತಂ !

ಸ್ವಾಗತಿಸುತಿವೆ ಪಕ್ಷಿಛಂದಂ ನಮೋನಮಃ !
ಸ್ವಾಗತಿಸುತಿವೆ ಪುಷ್ಪವೃಂದಂ ನಮೋನಮಃ !
ಸ್ವಾಗತಿಸುವೆ ಕೋಟಿ ಹೃದಯಂ ನಮೋನಮಃ !
ಶ್ರೀರಾಮಕೃಷ್ಣ ಪ್ರಭೋ ತವ ಸುಪ್ರಭಾತಂ !

## ನಗು, ಮುದ್ದು ಮಗೂ!

ನಗು, ನಗು, ನಗು,

ಓ ಮುದ್ದು ಮಗೂ!
ಮೊಗ್ಗು ಮೊಗದ ನೀನು ನಗೆ
ಹೂವು ಕಣಾ ಜಗದ ಹಗೆ :
ಎದೆಯ ಕಿಚ್ಚು ಮನದ ಹೊಗೆ
ಎಲ್ಲ ತೊಲಗಿ ಜೀವ ಬೆಳಗಿ

ಮುಗಿಲಿಲ್ಲದ ತಿಳಿಬಾನಿನ
ನೀಲಿಯಹುದು ಬಾಳ ಬಗೆ!
ನಗು, ನಗು, ನಗು,
ಓ ಮುದ್ದು ಮಗೂ!

## ಮೇಘಪುರ

ಮೇಘಪುರದೊಳಗಿರುವರಾರಮ್ಮಾ!

ಹೋಗಿ ಬರುವೆನು ನಾನೆನ್ನ ಕಳುಹಿಸಮ್ಮಾ!

ಮಳೆ ಬರುವ ಕಾಲದೊಳು
ತಳಿಸುತಿಳಿಯುವ ಹನಿಯ
ತೇರೇರಿ ವೈಭವದಿ
ಸಾರಿ ಬಂದೆಮ್ಮಿಳೆಗೆ
ಚೆಲುವ ತಂಬುವರು.

ಎಲೆಗಳಲಿ ಕುಣಿಯುತ್ತ
ಸುಮಗಳಲಿ ನಲಿಯುತ್ತ
ತೊರೆಗಳಲಿ ಗಳಪುತ್ತ
ಇಳೆಯ ಮೋಹಿಸುವರಾ
ಲಲಿತ ಬಾಲಕರು.

ಉಕ್ಕುವಾ ತಳಿರಾಗಿ
ಹಕ್ಕಿಯಿಂಚರವಾಗಿ
ಬಗೆಬಗೆಯ ಲೀಲೆಯಲಿ
ಚಿಗಿದು ತುಂಬುವರಿಳೆಯ
ಮುಗಿಲ ಬಾಲಕರು.

ಮನೆಯ ಹೆಂಚಿನ ಮೇಲೆ
ಹನಿಯ ದನಿಯಲಿ ಮೊರೆದು
ಕುಣಿದಾಡುವರು ಕರೆದು.
ಮನೆಯನಗಲರೆ ಅವರು!
ನನಗೇಕೆ ತಡೆಯು?

ಕಿರುಮಾಡಿನಂಗಳಕೆ
ಝುರಿಯಂತೆ ಸುರಿಯುವರು;
ತೊರೆ ಹರಿವ ತೊದಲಿಂದ
ಓಡುವರು ಕರೆದೆನ್ನ
ಬರವ ಹಾರೈಸಿ!

೨

ಸ್ವಾಗತವೀಯುವೆನವರಿಗೆ ಅಮ್ಮಾ!
ಮೇಘಪುರದ ಬಾಲಕರೈತರಲವಮ್ಮಾ!

ಅರಿಯೆನವರೆಂತಿಹರೊ!
ಅವರ ದನಿಯನು ಕೇಳಿ
ಅವರಿರುವರೆಂದರಿತೆ
ಕರೆದು ಆ ಗೆಳೆಯರನು
ಸರಸವಾಡುವೆನು.

ನೀರ್ ದನಿಯಾ ನಾ ಕೇಳಿ
ಹನಿಗಳಲಿ ಅವಿತಿಹರು
ಆ ಗೆಳೆಯರೆಂದರಿತು
ಕೈ ನೀಡಿ ಹಿಡಿಯಲಾ
ಹನಿಯೊಳವರಿಲ್ಲ!

ಮುಗಿಲ ಬಾಲರ ಗುಂಪು
ಮಲೆಯ ನೆತ್ತಿಯಿನಿಳಿದು
ಕಾಡ ಮೇಲಾಡುತಿರೆ –
ಮಗುವೆ ಹೋಗದಿರೆಂದು
ಅಗಲಿಕೆಯ ತರುವೆ.

ತೊರೆಗಳಲಿ ನಲಿವರೆಂ –
ದರಿತು ನಾನಲೆಗಳೊಳು
ಸರಸವಾಡಲು ಬಯಸೆ,
ಅರಿಯದವ ನೀನೆಂದು
ಬರಿದೆ ಬೆದರಿಸುವೆ.

ಗೆಳೆಯರನು ಕರೆಯೆ ನಾ
ಕೈ ಚಾಚಿ ಕೊರಳೆತ್ತಿ
ಓ ಬನ್ನಿ ಬನ್ನಿರೆನೆ
ನುಡಿಯದೆಯೆ ನಡೆವರಾ
ಕಡಲ ಮನೆಗೆ.

೩

ಏತಕ್ಕೆತಹರಿಲ್ಲಿಗವರಮ್ಮಾ?
ಭೂತಳವದೇನವರದೇನಮ್ಮಾ?

ವಿಜಯಯಾತ್ರೆಗೆ ಬಹರೊ?
ಈ ಜಗದ ಮಕ್ಕಳನು
ಕೂಡಿಯಾಡಲು ಬಹರೊ?
ಅಹುದಾದರೆನಗೇಕೆ
ಇಹದ ಸೆರೆ, ತಾಯೆ?

ಅವರಿಗಿಹ ಸ್ವಾತಂತ್ರ್ಯ
ನನಗಿಲ್ಲವೇಕಮ್ಮ?
ಅವರಿಗಿಮ್ಮಡಿ ಧೈರ್ಯ
ನನಗಿಹುದು; ನಿನ್ನೊಲುಮೆ
ನನಗೆ ಸೆರೆಯಮ್ಮ.

ಮುಗಿಲ ಬಾಲಕನಾಗಿ
ಹಗಲೆಲ್ಲ ಅಲೆಯುವೆನು.
ನಗ ಶೃಂಗಗಳ ಚರಿಸಿ
ನೆಗೆದಾಡಿ ಸಂಜೆಯೊಳು
ಮಗುವಾಗಿ ಬರುವೆ.

ನಿನ್ನ ಕರಗಳು, ತಾಯೆ,
ನನ್ನ ಸೆರೆಗೈದಿಹವು.
ಇನ್ನು ನಾನದ ಸಹಿಸೆ!
ಲೋಕವಿದು ಸಾಕು ಆ
ನಾಕ ಬೇಕಮ್ಮಾ.

ಗೆಳೆಯರೆನ್ನವರಮ್ಮಾ,
ಮುಗಿಲ ಮಕ್ಕಳ ಗುಂಪು.
ಅವರ ದನಿ ಬಲು ಇಂಪು,
ಅವರ ಮೆಯ್ ಬಲು ತಂಪು,
ಒಡನಾಟ ಸೊಂಪು.

ಮೇಘಪುರವದು ನಮ್ಮ ಊರಮ್ಮಾ;
ಆಗಸದ ಮಕ್ಕಳಾಂದಹೃದಯರಮ್ಮಾ!

## ಏಕೆ? – ಹೊಂಬಿಸಿಲು

ಕೋಟಿ ಕೋಟಿ ದೂರದಿಂದ

ಹೊಂಬಿಸಿಲಿದು ಬಂದಿದೆ;
ಸೂರ್ಯದೇವನಿಂದ, ಕಂದ,
ಚುಂಬನವನು ತಂದಿದೆ!
ಪೂರ್ವದುದಯಗಿರಿಯನೇರಿ,
ಕಂದರಗಳನಿರದೆ ಹಾರಿ,
ಸಾಂದ್ರವಿಪಿನಗಳನು ತೋರಿ
ಹಸುಳೆಬಿಸಿಲು ಬಂದಿದೆ:
ಕಂದ, ಮಿಹಿರದೇವನಿಂದ
ಮಿಸುನಿ ಕೃಪೆಯ ತಂದಿದೆ.

ಮಿರುಗಿ ಮೆರೆಯೆ ನೀರ ಪರಿಧಿ,
ನಿದ್ದೆಯಿಂದ ಎದ್ದ ಭರದಿ
ಉಚ್ಛ್ವಾಸಿಸೆ ನೀಲ ಶರಧಿ,
ಕನಕ ಕಿರಣ ಲೋಲರು
ತೆರೆಯ ತುದಿಯನೇರಿ ಇಳಿದು,
ನೊರೆಯುರುಳಿಯೊಳಾಡಿ ತುಳಿದು,
ಕಡಲ ದಾಂಟಿ, ನಿನ್ನನೊಲಿದು
ಬಂದಿಹರದೊ ಬಾಲರು!
ಬೆಟ್ಟದುದಿಯ ಕೋಡನೇರಿ
ಮುಂಬಿಸಿಲಿನ ಬರವ ಹಾರಿ

ಕುಳಿತ ಹುಲಿಯ ಬಣ್ಣ ಹೀರಿ
ಕದಿರ ಚವರಿ ಬಂದಿದೆ;
ಗೂಡಿನೆಡೆಗೆ ತಾಯಿಹಕ್ಕಿ
ಹಾರಿಬರಲು ಹರುಷವುಕ್ಕಿ
ಕೊಕ್ಕನದರ ಕೊಕ್ಕಿಗಿಕ್ಕಿ
ಮೇವು ಕೊಳುವ ಚುಕ್ಕಿಚುಕ್ಕಿ
ಮರಿಗಳೆದೆಗೆ ಮುತ್ತನಿಕ್ಕಿ
ಅವುಗಳೊಲವ ತಂದಿದೆ!

ಹಳದಿ ಪೈರು ಬೆಳೆದು ನಿಂತ
ಗದ್ದೆ ಬೈಲುಗಳ ಅನಂತ
ವಿಸ್ತಾರದ ಸಂಚಾರದ
ಸಿರಿಯನೆಲ್ಲ ತಂದಿದೆ!
ಇದಿರುಗೊಳಲು ನಡೆಯೊ, ಕಂದ!
ದೇವಕೃಪೆಯ ನಿನಗೆ ತಂದ
ರಶ್ಮಿರೂಪಿ ಮಿತ್ರವೃಂದ
ಬಾಗಿಲ ಬಳಿ ಬಂದಿದೆ! ೩೦

* * *